**8 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು.**

**ಸಿ.ಸಿ.ನಂ.22603/2019**

**ಸಿಡಬ್ಲ್ಯೂ-1, ಪಿಡಬ್ಲ್ಯೂ-1**

| | | |
|---|---|---|
| ಸಾಕ್ಷಿದಾರರ ಹೆಸರು | - | ಶ್ರೀಮತಿ ನವ್ಯ |
| ತಂದೆಯ /ಗಂಡನ ಹೆಸರು | - | ಸಂತೋಷ್ |
| ವಯಸ್ಸು | - | 29 ವರ್ಷ |
| ಕೆಲಸ | - | ಗೃಹಿಣಿ |
| ವಾಸ | - | ದೊಡ್ಡಬಳ್ಳಾಪುರ |

**ಸಾಕ್ಷಿಯನ್ನು ದಿನಾಂಕ 14-12-2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಹಿರಿಯ ಸಹಾಯಕ ಸಾರ್ವಜನಿಕ ಅಭಿಯೋಜಕರವರಿಂದಃ**

ಚಾಸಾ 2 ಮತ್ತು 3 ನನಗೆ ಗೊತ್ತು. ಚಾಸಾ 4 ಮತ್ತು 5 ನನ್ನ ತಾಯಿ-ತಂದೆ. ಚಾಸಾ 6 ನಮ್ಮ ಪಕ್ಕದ ಮನೆಯವರು, ಚಾಸಾ 7 ನನ್ನ ಅತ್ತೆ ಮಗಳು, ಚಾಸಾ 8 ನನ್ನ ಚಿಕ್ಕಮ್ಮ.

1 ನೇ ಆರೋಪಿ ನನ್ನ ಗಂಡ. 2 ಮತ್ತು 3 ನೇ ಆರೋಪಿತರು ಮಾವ ಮತ್ತು ಅತ್ತೆ. 4 ನೇ ಆರೋಪಿ ನನ್ನ ಗಂಡನ ಅಕ್ಕ. 5 ನೇ ಆರೋಪಿ 4 ನೇ ಆರೋಪಿ ಗಂಡ. 6 ನೇ ಆರೋಪಿ ನನ್ನ ಗಂಡನ ತಂಗಿ. 7 ನೇ ಆರೋಪಿ 6 ನೇ ಆರೋಪಿ ಗಂಡ.

ದಿ.24-06-2016 ರಂದು ನನಗೆ ಮಧ್ಯವರ್ತಿಗಳ ಮೂಲಕ 1 ನೇ ಆರೋಪಿಯ ಮದುವೆಯ ಸಂಬಂಧ ಬಂತು. ಮದುವೆ ಮಾತುಕತೆ ಸಮಯದಲ್ಲಿ ಆರೋಪಿತರು ಚಿಕ್ಕ ಬಾಣಾವರದಲ್ಲಿ ಸ್ವಂತ ಮನೆ ನಿರ್ಮಿಸಿದ ನಂತರ 2018 ರಲ್ಲಿ ಮದುವೆ ಮಾಡೋಣ ಎಂದು ನಮ್ಮ ಮನೆಯಲ್ಲಿ ಮಾತುಕತೆ ಆಯಿತು. ಅದೇ ರೀತಿ ಸದರಿ ಮಾತುಕತೆಯಲ್ಲಿ ಹುಡುಗನಿಗೆ 125 ಗ್ರಾಂ ಚಿನ್ನ, ನನಗೆ 150 ಗ್ರಾಂ ಚಿನ್ನ, ಅದ್ದೂರಿ ಬಟ್ಟೆಗಳು ಹಾಗೂ ಹುಡುಗನ ಕಡೆಯವರು ಹೇಳಿದ ಕಲ್ಯಾಣ ಮಂಟಪದಲ್ಲಿ ಮದುವೆ ಆಗುವಂತೆ ಮಾತುಕತೆಯಾಯಿತು. ಅದೇ ದಿನ ನಮ್ಮ ಮನೆಯಲ್ಲಿ ನನ್ನ ಮತ್ತು 1 ನೇ ಆರೋಪಿ ನಡುವೆ ಮದುವೆ ನಿಶ್ಚಿತಾರ್ಥ ನಡೆದಿರುತ್ತದೆ.

ದಿ.12-11-2018 ರಂದು ದೊಡ್ಡಬಳ್ಳಾಪುರದ ಮಾಂಗಲ್ಯ ಕಲ್ಯಾಣ ಮಂಟಪದಲ್ಲಿ ನಮ್ಮ ಮದುವೆ ಆಗಿರುತ್ತದೆ. ಮದುವೆಯ ಶಾಸ್ತ್ರದ ದಿನವೇ ನನ್ನ ಗಂಡನ ಮನೆಯವರೆಲ್ಲರೂ ಕಾಲುಂಗುರ ಹಾಕುವ ವಿಚಾರವಾಗಿ ನಮ್ಮ ತಂದೆ ತಾಯಿ ಜೊತೆ ಕಲ್ಯಾಣ ಮಂಟಪದಲ್ಲಿ ಜಗಳ ಮಾಡಿದ್ದು ಅದನ್ನು ಅನುಸರಿಸಿಕೊಂಡು ಸುಮ್ಮನಾದೆವು. ಮದುವೆಯಾದ ಒಂದು ವಾರದಲ್ಲಿ ಆರೋಪಿತರು ನೀನು ಕಡಿಮೆ ವಡವೆ ತಂದಿದ್ದೀಯ, ನಿನ್ನ ಗಂಡನಿಗೆ ದೊಡ್ಡ ಕತ್ತಿನ ಚಿನ್ನದ ಸರ ಮಾಡಿಕೊಡಬೇಕಾಗಿತ್ತು ಎಂದು 4 ಮತ್ತು 6 ನೇ ಆರೋಪಿತರು ನನಗೆ ಹೇಳಿದರು. ಅದೇ ರೀತಿ ನನಗೆ ಮದುವೆಯಲ್ಲಿ ಬಂದ ಉಡುಗೊರೆಗಳನ್ನು ನನ್ನ ಗಂಡನ ಮನೆಯವರಿಗೆ ಕೊಡಬೇಕು ಎಂದು 6 ನೇ ಆರೋಪಿ ಬೇಡಿಕೆ ಇಟ್ಟರು. ಅಡುಗೆ ಮಾಡುವ ವಿಚಾರಕ್ಕೆ ಸಹ 4 ನೇ ಆರೋಪಿ ಚಪಾತಿ ಸರಿಯಾಗಿ ಮಾಡುವುದಿಲ್ಲ ಹಾಗೂ ತರಕಾರಿ ಸರಿಯಾಗಿ ಕಟ್ ಮಾಡುವುದಿಲ್ಲ ಎಂದು ಹೀಯ್ಯಾಳಿಸುತ್ತಿದ್ದರು. 4 ಮತ್ತು 6 ನೇ ಆರೋಪಿತರು ನನ್ನನ್ನು ಕರೆದು ಮೊದಲು ನಮ್ಮ ಜೊತೆ ಅನುಸರಿಸಿಕೊಂಡು ಹೋಗು, ನಾವು ಹೇಳಿದಂತೆ ಕೇಳು ಇಲ್ಲದಿದ್ದರೆ ನಿನ್ನ ಗಂಡನ ಜೊತೆ ಸಂಸಾರ ಮಾಡಲು ಬಿಡುವುದಿಲ್ಲ ಎಂದು ಎಚ್ಚರಿಕೆ ನೀಡುತ್ತಿದ್ದರು. ಸದರಿ ವಿಷಯವನ್ನು ನನ್ನ ಗಂಡನಿಗೆ ಹೇಳಿದಾಗ ಅವರು ಸಹ 4 ಮತ್ತು 6 ನೇ ಆರೋಪಿತರು ಹೇಳಿದ ಹಾಗೇ ಅನುಸರಿಸಿಕೊಂಡು ಹೋಗು ಇಲ್ಲದಿದ್ದರೆ ನಿನ್ನ ತವರು ಮನೆಗೆ ಹೋಗು ಎಂದು ಹೇಳಿದರು. ನನ್ನ ಗಂಡನಿಗೆ ಹಾಲು, ಕಾಫಿ ಕೊಡಬೇಕಾದರೆ ಅವರ ಅಕ್ಕನ ಅನುಮತಿ ಪಡೆದು ಕೊಡಬೇಕಾಗಿತ್ತು ಇಲ್ಲದಿದ್ದರೆ ನನ್ನ ಜೊತೆ ಜಗಳ ಮಾಡುತ್ತಿದ್ದರು. ನನ್ನ ಅತ್ತೆ ಸಹ ತನ್ನ ಹೆಣ್ಣು ಮಕ್ಕಳು ಹೇಳಿದಂತೆ ಕೇಳಿಕೊಂಡು ಹೋಗು, ನಮಗೆ ಇಷ್ಟ ಇಲ್ಲದೇ ನಿನ್ನನ್ನು ಮದುವೆ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಿದ್ದರು. ಸಣ್ಣ ಪುಟ್ಟ ವಿಚಾರಕ್ಕೆ ಆರೋಪಿತರು ಮಾನಸಿಕ ಹಿಂಸೆ ಕೊಡುತ್ತಿದ್ದರು.

ದಿ.28-01-2019 ರಂದು ನನ್ನ ಅತ್ತೆ ತನ್ನ ಮಕ್ಕಳಿಗೆ ಸರಿಯಾಗಿ ಮರ್ಯಾದೆ ಕೊಡುತ್ತಿಲ್ಲ ಎಂದು ಮರದ ಲಟ್ಟಣಿಗೆಯಿಂದ ನನ್ನ ಹಣೆಗೆ ರಕ್ತಗಾಯ ಮಾಡಿದರು. ನನ್ನ ಗಂಡ ನನಗೆ ರಕ್ತ ಬರುತ್ತಿದ್ದರೂ ಸಹ ಏನಾಗಿದೆ ಎಂದು ಸಹ ವಿಚಾರಿಸಲಿಲ್ಲ, ನಾನು ನನ್ನ ಗಂಡನಿಗೆ ಹೇಳಿದಾಗ ನಿನ್ನ ಕರ್ಮ ನೀನು ಅನುಭವಿಸು, ನಾವು ಇರೋದು ಹೀಗೆ, ಇದ್ದರೆ ಇರಬಹುದು, ಇಲ್ಲದಿದ್ದರೆ

ತವರು ಮನೆಗೆ ಹೋಗಬಹುದು ಎಂದು ನನಗೆ ಬೈದ್ದರು. ನಂತರ ನನ್ನ ಗಂಡ ನನ್ನನ್ನು ನನ್ನ ತವರು ಮನೆಗೆ ಬಿಟ್ಟು ಬಂದರು. ನಾನು ಆಸ್ಪತ್ರೆಗೆ ಆಯಾಸವಾಗಿ ಹೋದಾಗ ನಾನು ಗರ್ಭಿಣಿ ಎಂಬ ವಿಚಾರ ತಿಳಿಯಿತು. ನಾನು ನನ್ನ ಚಿಕ್ಕಮ್ಮ, ನನ್ನ ತಾಯಿ - ತಂದೆ ಹಾಗೂ ನಮ್ಮ ಜನಾಂಗದ ಅಧ್ಯಕ್ಷರು ನನ್ನ ಗಂಡನ ಮನೆಗೆ ಬಂದಾಗ ನನ್ನ ಅತ್ತೆ ಮತ್ತು 4 ನೇ ಆರೋಪಿ ನಮ್ಮನ್ನು ಗೇಟ್ ಬಳಿ ಸುಮಾರು ಅರ್ಧ ಗಂಟೆ  ನಿಲ್ಲಿಸಿ ಒಳಗೆ ಹೋದ ನಂತರ ನಾನು ಗರ್ಭಿಣಿಯಾದ ಬಗ್ಗೆ ತಿಳಿಸಿದಾಗ ನನ್ನ ಗಂಡ ನಿನ್ನನ್ನು ಮುಟ್ಟೆ ಇಲ್ಲ ಹೇಗೆ ಗರ್ಭಿಣಿಯಾದೆ ಜಗಳ ತೆಗೆದ, ಆಗ ನಮ್ಮ ಅಧ್ಯಕ್ಷರು ಕೇಳಿದಾಗ 5 ಬಾರಿ ಮುಟ್ಟಿರುವುದಾಗಿ ಒಪ್ಪಿಕೊಂಡ. ನಂತರ 4 ನೇ ಆರೋಪಿ ಹೊಯ್ಸಳ ಪೊಲೀಸರಿಗೆ ಕರೆ ಮಾಡಿ ನಮ್ಮ ಕಡೆಯವರು ಗಲಾಟೆ ಮಾಡುತ್ತಿದ್ದಾರೆ ಎಂದು ತಿಳಿಸಿದರು. ನಾವು ಪೊಲೀಸ್ ಠಾಣೆಗೆ ಹೋದಾಗ ಇಬ್ಬರಿಗೂ ಬುದ್ದಿವಾದ ಹೇಳಿ ಎರಡು ತಿಂಗಳಲ್ಲಿ ಬೇರೆ ಮನೆ ಮಾಡುವಂತೆ ನನ್ನ ಗಂಡನಿಗೆ ಹೇಳಿದರು. ಅವರು ಸಹ ಒಪ್ಪಿದರು. ನಂತರ ನಾನು ನನ್ನ ತಾಯಿ ಮನೆಗೆ ಹೋದೆ. ಅದೇ ದಿನ ರಾತ್ರಿ ನನ್ನ ಗಂಡನಿಗೆ ಕರೆ ಮಾಡಿ ಯಾವಾಗ ಬರುತ್ತೀಯಾ ಎಂದು ಕೇಳಿದಾಗ ನನಗೆ 5 ಲಕ್ಷ ಮನೆ ಕಟ್ಟಲು ಹಣ ಬೇಕು ಎಂದು ಕೇಳಿದರು. ಅದಕ್ಕೆ ನಾವು ಆಗುವುದಿಲ್ಲ ಎಂದು ಹೇಳಿದೆವು. ಆಗ ನನ್ನ ಗಂಡ ನೀನು ಅಲ್ಲೇ ಇರು ಎಂದು ನನ್ನ ಮೊಬೈಲ್ ನಂಬರನ್ನು ಬ್ಲಾಕ್ ಲಿಸ್ಟ್ ಗೆ ಹಾಕಿದ್ದು ಇಲ್ಲಿಯತನಕ ಅವರ ಜೊತೆ ಯಾವುದೇ ಸಂಪರ್ಕ ಇರುವುದಿಲ್ಲ. ಪುನಃ ನಾನು ಠಾಣೆಗೆ ಹೋಗಿ ನನ್ನ ಗಂಡನನ್ನು ಕರೆಸುವಂತೆ 5 ಬಾರಿ ಮನವಿ ಮಾಡಿದೆವು. ಕೊನೆಯ ಬಾರಿ ಪೊಲೀಸರು ನನ್ನ ಗಂಡನನ್ನು ಕರೆಸಿದ್ದು ಅವರು ಆಗಲೂ ಸಹ ನನ್ನನ್ನು ಕರೆದುಕೊಂಡು ಹೋಗುತ್ತೇನೆ ಒಪ್ಪಿಕೊಂಡರು. ನಾನು ಮತ್ತು ನನ್ನ ಗಂಡ ಪೊಲೀಸ್ ಠಾಣೆಯ ಮುಂಭಾಗದ ಹೋಟೆಲ್ ನಲ್ಲಿ ತಂಪು ಪಾನಿಯ ಕುಡಿಯುತ್ತಿದ್ದಾಗ 6 ನೇ ಆರೋಪಿ ಅಲ್ಲಿಗೆ ಬಂದು ಗಲಾಟೆ ಮಾಡಿ ನನ್ನ ಗಂಡನನ್ನು ಕರೆದುಕೊಂಡು ಹೋದರು. ನಂತರ ಮಹಿಳಾ ಸಾಂತ್ವನ ಕೇಂದ್ರಕ್ಕೆ ಸಹ ದೂರು ಕೊಟ್ಟಿದ್ದು ನನ್ನ ಗಂಡ ಹಾಜರಾಗಲಿಲ್ಲ.

ದಿ.10-04-2019 ರಂದು ನಾನು ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟೆ. ಈಗ ಸಾಕ್ಷಿಗೆ ದೂರನ್ನು ತೋರಿಸಲಾಗುತ್ತಿದ್ದು ಅದನ್ನು ಸಾಕ್ಷಿಯು ನೋಡಿ ಗುರ್ತಿಸಿದ ಮೇರೆಗೆ ಅದನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರ್ತಿಸಲಾಯಿತು.

ಮರುದಿನ ಪೊಲೀಸರು ನಾನು ತೋರಿಸಿದ ಘಟನಾ ಸ್ಥಳಕ್ಕೆ ಬಂದು ಬೆಳಿಗ್ಗೆ 09-30 ರಿಂದ 10-30 ಗಂಟೆವರೆಗೆ ಚಾಸಾ 2 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಿ ನನ್ನ ಸಹಿ ಪಡೆದಿರುತ್ತಾರೆ. ಈಗ ಸಾಕ್ಷಿಗೆ ಸ್ಥಳ ಪಂಚನಾಮೆ ತೋರಿಸಲಾಗುತ್ತಿದ್ದು ಅದನ್ನು ಸಾಕ್ಷಿಯು ನೋಡಿ ಗುರ್ತಿಸಿದ ಮೇರೆಗೆ ಅದನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರ್ತಿಸಲಾಯಿತು.

ಈ ಪ್ರಕರಣದ ಕುರಿತು ಮುಂದುವರಿದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದು ಸದರಿ ಹೇಳಿಕೆಯಲ್ಲಿ ಲಟ್ಟಣಿಗೆಯಿಂದ ನನ್ನ ಹಣೆಗೆ ನನ್ನ ಅತ್ತೆ ಹೊಡೆದು ರಕ್ತಗಾಯಪಡಿಸಿದ್ದು ಅದಕ್ಕೆ ಯಾವುದೇ ಚಿಕಿತ್ಸೆ ಆಸ್ಪತ್ರೆಯಲ್ಲಿ ಪಡೆದುಕೊಂಡಿರುವುದಿಲ್ಲ ಎಂದು ತಿಳಿಸಿರುತ್ತಾನೆ. ಮದುವೆಗೆ ಸಂಬಂಧಪಟ್ಟ ಲಗ್ನಪತ್ರಿಕೆಯನ್ನು ತೋರಿಸಲಾಗುತ್ತಿದ್ದು ಅದನ್ನು ಸಾಕ್ಷಿಯು ನೋಡಿ ಗುರ್ತಿಸಿದ ಮೇರೆಗೆ ಅದನ್ನು ನಿಪಿ.3 ಎಂದು, ಮದುವೆಯ ಮೂರು ಪೋಟೋಗಳನ್ನು ತೋರಿಸಲಾಗುತ್ತಿದ್ದು ಅವುಗಳನ್ನು ಸಾಕ್ಷಿಯು ನೋಡಿ ಗುರ್ತಿಸಿದ ಮೇರೆಗೆ ಅದನ್ನು ನಿಪಿ.4 ರಿಂದ 6 ಎಂದು ಗುರ್ತಿಸಲಾಯಿತು.

3 ಮತ್ತು 5 ನೇ ಆರೋಪಿತರನ್ನು ಹೊರತುಪಡಿಸಿ ಉಳಿದ ಆರೋಪಿತರು ಇಂದು ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿ ನೋಡಿ ಗುರ್ತಿಸಿರುತ್ತಾರೆ.

**ಮುಂದುವರಿದ ಮುಖ್ಯ ವಿಚಾರಣೆಯನ್ನು ಮನವಿಯ ಮೇರೆಗೆ ಮುಂದೂಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿಸಹಿ ಮಾಡಲಾಗಿದೆ.)

**ಓ ಹೇ ಕೇ ಸ ಇ ಒ**

**8 ನೇ ಅ. ಮು. ಮ. ದಂ. ನ್ಯಾ.**